ಹೆಡ್ಡಾಗಿಬಿಟ್ಟಿತ್ತು. ಅದು ಈ ಮಲ್ಲಿಗಿಗೆ ಭಯಂಕರ ತಾಪ. ಒಬ್ಬರು ಬಂದರ ಇನ್ನೊಬ್ಬರು ಅವರ ಮಾರೀ ಮ್ಯಾಲ ಹೊಡೆದ ಹಾಂಗ ಎದ್ದು ಹೋಗಿಬಿಡತಿದ್ದರು. ಜಾಜಿಗೆ ಇದು ಬಲು ಆಶ್ಚರ್ಯ. ಹಿಂಗ ಹೆಂಗ ದಿನಾ ಒಟ್ಟಿಗೆ ಕೆಲಸ ಮಾಡುವವರು ಝಗಳಾಡಿಕೋತ ಹೆಂಗ ಇರತಾರಪಾ ಅನ್ನೋದು ಅಕೀಗೆ ಬಗೆಹರಿಯದ ಪ್ರಶ್ನೆಯಾಗಿತ್ತು. ಎಳ್ಳಷ್ಟೂ ನಾಚಿಕಿ ಇಲ್ಲದ ತನ್ನ ಜೀವನದ ಹೆಚ್ಚುಗಾರಿಕಿ ಹೇಳತಿದ್ದಳು. ತನ್ನಗಂಡನಿಗೆ ಅವರ ಫ್ಯಾಮಿಲಿ ಜ್ಯುವೆಲ್ಲರು ಚಿನ್ನದ ರೇಟು ಕಡಿಮೆಯಾಗಿದೆಯೆಂದು ಫೋನು ಮಾಡಿದ್ದರೆಂದೂ, ತನ್ನನ್ನಲ್ಲಿಗೆ ಕರೆದೊಯ್ದು ಪತಿದೇವರು ಒತ್ತಾಯದಿಂದ ತಾನ್ ಎಷ್ಟೇ ಬೇಡ ಬೇಡವೆಂದರೂ ಎರಡು ಸೆಟ್ಟು ನೆಕ್ಲೇಸೂ ಓಲೆಗಳನ್ನೂ ಕೊಂಡಿದ್ದಾಯಿತು. ಇದು ಅದ್ದರದ್ದೇ ಇಯರ್ ರಿಂಗ್ ಕಣ್ರಿ ಎಂದು ಹೆಡ್ ಮಾಸ್ತರಿಣಿಗೆ ಕೇಳುವ ಹಾಗೆಯೇ ಬಡಾಯಿ ಕೊಚ್ಚುವುದರಲ್ಲಿಯೇ ಅಕಿ ತನ್ನ ಜನ್ಮದ ಸಾರ್ಥಕ್ಯ ಕಾಣುತ್ತಿದ್ದಾಳೆಂದು ಅನಿಸುತ್ತಿತ್ತು. ಹೇಳಿ ಕೇಳಿ ಹೆಡ್ ಮಾಸ್ತರಿಣಿಯ ಕುಡುಕ ಗಂಡ ಇಪ್ಪತ್ತು ವರ್ಷಗಳ ಹಿಂದೆ ಓಡಿ ಹೋಗಿದ್ದ. ಮೂರು ಮಕ್ಕಳ ಜೋಡಿ ಒಂಟಿ ಬದುಕು ಅಕೀಯದು. ಅಕಿಗೆ ಯಾರು ಕೊಡಿಸಬೇಕು ಬಂಗಾರ?... ಮೈಸೂರು ಮೀರಾಳ ಈ ಕುಹಕ ಬುದ್ಧಿ ಎಲ್ಲರಿಗೂ ತಿಳಿಯುತ್ತಿತ್ತು. ಆದರೂ ಯಾರೂ ಏನೂ ಭಾಳ ಅಕಿಗೆ ಅನಲಿಕ್ಕೆ ಹೋಗತಿದ್ದಿಲ್ಲ. ಆದರ ಜಾಜಿ ಜೋಡೀ ಮಾತ್ರ ಅಗದೀ ಬರೊಬ್ಬರಿ ಮಾತಾಡತಿದ್ದಳು. ಮುಖ್ಯ ಕಾರಣ ಅಂದರ ಜಾಜಿ ಮತ್ತ ಮೈಸೂರು ಮಲ್ಲಿಗಿ ಇಬ್ಬರಿಗೂ ಪುಸ್ತಕ ಓದೋ ಚಟ ಇತ್ತು. ಹೆಡ್ ಮಾಸ್ತರಿಣಿ ಜೋಡೀ ಅಂತೂ ಜಾಜಿ ಅಗದಿ ಸ್ನೇಹದಿಂದಿದ್ದಳು. ಜಾಜಿ ಸೂಕ್ಷ್ಮ ಕಣ್ಣಿಗೆ ಇವತ್ತ ಯಾಕೋ ಮೀರಾ ಸ್ಯಾಡ್ ಅನಿಸಿದಳು. ಹಣ್ಣು ಅನ್ನೋ ಪದಕ್ಕ ಒಬ್ಬ ವಿದ್ಯಾರ್ಥಿ ಮರದ ಮೇಲೆ ಬೆಳೆಯುವ ತಿಂಡಿ ಅಂತ ಬರದಾನ ಅಂತ ಜಾಜಿ ಹೇಳಿದ ಕೂಡ್ಲೆ ಮೀರಾ ಮತ್ತ ನಗಲಿಕ್ಕೆ ಸುರು ಮಾಡಿದಳು. ನಕ್ಕೋತ ನಕ್ಕೋತ ಅಕೀ ಕಣ್ಣಾಗ ನೀರು ಬಂದವು. ಅಕೀ ಅದನ್ನ ವರೆಸಿಗೋತ ನಗಬೇಕಂತ ಪ್ರಯತ್ನ ಮಾಡೇ ಮಾಡಿದಳು. ಆದರ ಆಗಲಿಲ್ಲ. ಬಿಕ್ಕಳಿಸಿದಳು. ಸರಕ್ಕನ ಮಾರೀ ತಿರಗೀಸಿ ವಾಶ್‌ರೂಮಿಗೆ ಹೋಗಿ ಬರತೇನಂತ ಉಸುರಿ ಹೋಗಿಬಿಟ್ಟಳು. ಜಾಜಿಗೆ ಹಿಂಗ್ಯಾಕ ಆತು ಅಂತ ಅನ್ನಿಸಿತು. ಇಕೀ ಮಗಳ ಮದುವಿ ಕಥೀ ಎಲ್ಲಿಗೆ ಬಂತೋ?... ಏನು ಕ್ಯಾನ್ಸಲ್ ಗೀನ್ಸಲ್ ಆತೋ ಅಂತ ವಿಚಾರ ಮಾಡಿಕೋತ ಮ್ಯಾಲೆ ತನ್ನ ಸ್ಟಾಫ್ ರೂಮಿಗೆ ಹೊಂಟಿದ್ದಳು. ಅಷ್ಟರಾಗ ರಾಣಿ ಜೇನು ಬಂದು ಗುಂಯ್ ಗುಟ್ಟಿಗೋತ ಎಲ್ಲಾರಿಗೂ ಕೆಲಸ ಹಂಚಲಿಕ್ಕೆ ಹತ್ತಿತು. ಮಲ್ಲಿಗಿ ವಾಶ್ ರೂಮಿನಿಂದ ವಾಪಸ್ಸು ಬಂತು. ಅಕಿ ಬಂದದ್ದು ನೋಡಿ ರಾಣಿ ಜೇನು ತನ್ನ ಗೂಡಿಗೆ ಮರಳಿ ಬಿಟ್ಟಿತು. ಜಾಜಿ ತನ್ನ ಎಂದಿನ ಭೋಳೇತನದಿಂದ, 'ಮಗಳದು ಎಲ್ಲಾ ಬರೊಬ್ಬರಿ ನಡೇದದ ಹೌದಲ್ಲೋ? ಯಾಕ ಇಷ್ಟು ಸ್ಯಾಡ್ ಆಗೀ?' ಎಂದು ಕೇಳಿದಳು. ಮೀರಾ, 'ಏನೋ ಹೇಳ್ಕೊಳ್ಳೊಕ್ ಆಗ್ದೇ ಇರೋ ನೋವು ಜಾಜಿ... ಬಹುಶಃ ಯಾವುದೋ ಕವನ ಒದ್ಕೊಂಡು ಹೊರಗ್ ಬರ್ತಾ ಇದೆ ಅನಿಸುತ್ತೆ... ಪ್ರಸವ ವೇದನೆ...' ಅಂದಳು. ಇಂಥಾ ಮಾತೆಲ್ಲಾ ಜಾಜಿಗೆ ಭಾಳ ನಾಟಕೀಯ ಅನಿಸತಿತ್ತು. ಆದರೂ ಅಕಿ, 'ಹೌದಾ... ಬೇಗ ಕವಿತೆ ಹುಟ್ಟಲಿ, ಸುಖ ಪ್ರಸವವಾಗಲಿ' ಅಂತ ನಕ್ಕೋತ ಅಂದು ತನ್ನ ಹೈಸ್ಕೂಲಿನ ಸ್ಟಾಫ್ ರೂಮಿಗೆ ಹೋದಳು.

ಅಂದಿನ ಕೆಲಸಗಳನ್ನು ಸುರು ಮಾಡಿದ ಜಾಜಿಗೆ ಮೈಸೂರು ಮಲ್ಲಿಗೆಯ ಕಣ್ಣೀರು ಮರತು ಹೋತು. ಟೆಸ್ಟಿನ ಪೇಪರ್ ಸೆಟ್ ಮಾಡಿ, ಎರಡು ಕ್ಲಾಸಿನ ಅರವತ್ತು ಪುಸ್ತಕಗಳನ್ನು ಚಹಾ ಕುಡಕೋತ ಕರೆಕ್ಷನ್ ಮಾಡಿ, ಏಳನೇ ಕ್ಲಾಸಿನ ಹುಡುಗೂರಿಗೆ ಕನ್ನಡ ರಾಜ್ಯೋತ್ಸವದ ಪ್ರ್ಯಾಕ್ಟೀಸು ಮಾಡಿಸಿ, ಹತ್ತನೇ ಕ್ಲಾಸಿನ ಮಕ್ಕಳಿಗೆ ಕ್ಲಾಸ್ ಟೆಸ್ಟ್ ಮುಗಿಸಿ, ಒಂಬತ್ತನೇ ಕ್ಲಾಸಿನ